ದಪ್ಪವಾಗಿ ಮೇಲೆದ್ದು ಹಂಪುಗಳಂತೆ ಉಬ್ಬಿನಿಂತು ರಸ್ತೆಯ ಸಮತಟ್ಟನ್ನೆಲ್ಲ ಹಾಳು ಮಾಡಿ ಅನೇಕ ಅಪಘಾತಗಳಿಗೆ ಕಾರಣನಾಗಿದ್ದೇನಂತೆ... ಹಾಗೆ ಉಬ್ಬಿದ ಕಾರಣಕ್ಕೆ ಬಿರುಕು ಬಿಟ್ಟ ಡಾಂಬರಿನ ಸಂದಿಯಿಂದ ಮಳೆಯ ನೀರೆಲ್ಲ ಭೂಮಿಯೊಳಕ್ಕೆ ಜಿನುಗಿ ಪಾಟ್‌ಹೋಲ್‌ಗಳು ನಿರ್ಮಾಣವಾಗುವುದರಿಂದ ಗುಂಡಿ ಮುಚ್ಚಲು ಸರ್ಕಾರಕ್ಕೆ ಅಪಾರ ನಷ್ಟವುಂಟಾಗಿದೆಯಂತೆ... ಇವೆಲ್ಲ ರಾಷ್ಟ್ರೀಯ ಹೆದ್ದಾರಿ ನಿಯಮಾವಳಿಗಳಿಗೆ ವಿರುದ್ಧವಂತೆ. ಹಾಗಾಗಿ ನಾನಿದ್ದರೆ ತಾನೇ ಇವೆಲ್ಲ ಎಂದು ಮಂತ್ರಿ ಮಹೋದಯರೊಬ್ಬರು ನನ್ನನ್ನು ಬುಡಮೇಲು ಮಾಡಿಬಿಡಬೇಕೆಂದು ಮೀಟಿಂಗಿನಲ್ಲಿ ಅಪ್ಪಣೆ ಕೊಟ್ಟುಬಿಟ್ಟಿದ್ದಾರಂತೆ... ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಪರಿಸರವಾದಿಗಳು, ಮೀಡಿಯಾದವರು ಗಲಾಟೆ ಮಾಡಿದರೆ ಸರ್ಕಾರಿ ಜಮೀನಿನಲ್ಲಿ ಒಂದು ಮರಕ್ಕೆ ಬದಲಿಯಾಗಿ ಹತ್ತು ಮರ ನೆಟ್ಟು ಬೆಳೆಸಲು ಮಂತ್ರಿಗಳು ಅನುದಾನ ಮಂಜೂರು ಮಾಡಿದ್ದಾರೆಂದು ತಿಳಿಸುವಂತೆ ಹೇಳಿ ಟವಲ್ಲು ಕೊಡವಿಕೊಂಡು ಎದ್ದುಹೋದರಂತೆ...

ಇದೆಲ್ಲ ನನಗೆ ಹೇಗೆ ಗೊತ್ತಾಗುತ್ತದೆಂದು ನಿಮಗೆ ಆಶ್ಚರ್ಯವೇ? ನಾನು ನಿಮ್ಮಂತೆ ಮನುಷ್ಯನಲ್ಲದಿರಬಹುದು. ಆದರೆ ಈ ಭೂಮಿಯ ಮೇಲೆ, ಭೂಮಿಯ ಒಳಗೆ ನಡೆಯುವ ಸಕಲೆಂಟು ವಿಚಾರಗಳೂ ನನ್ನ ಅರಿವಿಗೆ ಬರುತ್ತವೆ. ನನ್ನ ರೆಕ್ಕೆಗಳು ಮೇಲೆ ವಿಸ್ತರಿಸಿರುವಷ್ಟೇ ಆಳಕ್ಕೆ, ಅಗಲಕ್ಕೆ ನನ್ನ ಬೇರುಗಳು ಪಸರಿಸಿವೆ. ಈ ಭೂಮಿಯ ಮೇಲಿನ ಘಟನಾವಳಿಗಳು ಮಾತ್ರವಲ್ಲ, ನೆಲದಾಳದ ತವಕ ತಲ್ಲಣಗಳು, ಅಲ್ಲೆಲ್ಲೋ ಆಗುವ ಭೂಕಂಪದ, ಸುನಾಮಿಯ ಕಂಪನಾಂಕಗಳು ನನ್ನನ್ನು ತಲುಪಿ ತಳಮಳಗೊಳಿಸುತ್ತವೆ. ಎಲ್ಲೆಲ್ಲೋ ಹರಿಯುವ ನದಿಗಳಿಂದ, ಕೆರೆ ಸರೋವರಗಳಿಂದ ಭೂಮಿಯೊಳಗೆ ಹಿಂಗಿದ ನೀರು ಪ್ರಾಣಿಗಳ ನರನಾಡಿಗಳಲ್ಲಿ ಹರಿವ ರಕ್ತದಂತೆ ಜಲದ ರೂಪದಲ್ಲಿ ಬಂದು ಸಕಲ ಚರಾಚರಗಳ ಕಥೆ ಹೇಳುತ್ತವೆ. ಸಮುದ್ರದ ಮೇಲಿಂದ ಆವಿಯಾಗಿ ಮೋಡ ಸೇರಿ ಮಳೆಯಾಗಿ ಉದುರುವಾಗ ನನ್ನ ಮೈಮೇಲೆ ಮುತ್ತಿನ ಮಣಿಗಳಂತೆ ಕುಳಿತು ಅಲ್ಲಲ್ಲಿನ ಕಥೆ ಹೇಳುತ್ತವೆ. ಆ ಮೋಡಗಳೋ ಬೇಸಿಗೆ ಬಿಸಿಲೆನ್ನದೇ ಅಂತರ ಪಿಶಾಚಿಗಳಂತೆ ಆಕಾಶದಲ್ಲಿ ಅಂಡಲೆಯುತ್ತ ಇಡೀ ಭೂಮಂಡಲವನ್ನು ಗಿರಕಿ ಹಾಕಿ ಅಲ್ಲಲ್ಲಿನದನ್ನೆಲ್ಲ ಆವಾಹಿಸಿಕೊಂಡು ಬಂದು, ಮಬ್ಬಲ್ಲಿ ಮಂಜಾಗಿ ಮಂಜಂತುದುರಿ, ಸುಯ್ಯನೆ ಸುಳಿವ ತಂಗಾಳಿಗೆ ಮತ್ತಷ್ಟು ತಂಪಾಗಿ ಬೆಚ್ಚನೆಯ ನನ್ನ ಎಲೆಗಳಿಂದ ಪುಳಕಗೊಂಡು ನಾಚುತ್ತ ಒಂದೊಂದು ಹನಿಯೂ ಒಂದೊಂದು ಕಥೆಯನ್ನು ಉಸುರುತ್ತವೆ. ಹೀಗೆ ಸಮುದ್ರದ ನೀರು ಆವಿಯಾಗಿ, ಮೋಡವಾಗಿ, ಮಳೆಯಾಗಿ, ನದಿಯಾಗಿ ಮತ್ತೆ ಸಾಗರ ಸೇರಿ, ಬಿಸಿಲಿನ ತಾಪಕ್ಕೆ ಪುನಃ ಆವಿಯಾಗಿ... ಹೀಗೆ ಪುನರಾವರ್ತನೆಗೊಳ್ಳುವ ಪ್ರಕ್ರಿಯೆಯಲ್ಲಿ ಇಡೀ ಭೂಮಂಡಲದ ಸಕಲೆಂಟು ವಿಚಾರಗಳನ್ನು ಅರಿತುಕೊಂಡು ಬಂದು ನನಗೆ ಅರಹುತ್ತವೆ. ಇನ್ನು ಮನೆಮನೆಯ, ಮೂಲೆಮೂಲೆಯ ಕಥೆ ಹೇಳುವುದೇ ಈ ಗಾಳಿ. ಎಲ್ಲೆಲ್ಲೋ ಅಲೆದಾಡಿ ಮಲಿನಗೊಂಡು ಬರುವಂಥ ಗಾಳಿಯನ್ನು ನನ್ನ ಎಲೆಗಳು ಕುಡಿದು ಶುದ್ಧಗಾಳಿಯನ್ನು ಹೊರಬಿಡುವಷ್ಟರಲ್ಲಿ ಅದರ ಜೊತೆ ಸಮ್ಮಿಳಿತವಾಗಿದ್ದ ಕಥೆಗಳೆಲ್ಲ ನನ್ನೊಳಗೆ ಇಳಿದು ಅಂತರ್ಧಾನವಾಗಿಬಿಡುತ್ತವೆ. ಸರ್ವಾಂತರ್ಯಾಮಿಯಾದ ಈ ಗಾಳಿ ಎಂಬುದಕ್ಕೆ ಇರುವಂಥ ಸಂವೇದನೆ ಬಹುಶಃ ಬೇರೆ ಯಾವುದಕ್ಕೂ ಇಲ್ಲವೇನೋ!

ಈ ಭೂಮಿ ಮೇಲೆ ಗಾಳಿ ಎಂಬುದೊಂದು ಇರದಿದ್ದರೆ ಏನಾಗುತ್ತಿತ್ತು ಎಂದು ಒಂದು ಕ್ಷಣ ಆಲೋಚಿಸಿದರೆ ಅದರ ಅಗಾಧ ಪರಿಣಾಮದ ಅರಿವಾದೀತೇನೋ. ಯಾವ ಪ್ರಾಣಿ, ಪಕ್ಷಿ, ಕ್ರಿಮಿ, ಕೀಟಗಳಿರಲಿ, ಕಳೆ, ಸಸ್ಯ, ಮರಗಳಾದಿಯಾಗಿ ಏನೇನೂ ಈ ಭೂಮಿ ಮೇಲೆ ಜೀವಂತ ಇರುತ್ತಿರಲಿಲ್ಲ. ಅದಕ್ಕೇ ಇದನ್ನು ಪ್ರಾಣವಾಯು ಎನ್ನುವುದು. ಎಂದೇ ಗಾಳಿಯ ಈ ಉಸಿರಾಟ ನಿಂತ ತಕ್ಷಣ ಆ ಜೀವಿ ಸತ್ತೇ ಹೋಗುತ್ತದೆ. ಅದು ಒಳಗಿರುವ ತನಕ ಎಂತೆಂಥ ಆರ್ಭಟ? ಅದು ನಿಂತ ಮರುಕ್ಷಣವೇ ಎಲ್ಲವೂ ಶೂನ್ಯ... ಎಂಥ ವಿಪರ್ಯಾಸ ಅಲ್ಲವೇ? ಹಾಗಾದರೆ ಆ ಗಾಳಿಗಾದರೂ ಅಂಥ ಅಗಾಧತೆ ಹೇಗೆ ಬಂತು? ಯಕ್ಷ, ಧರ್ಮರಾಯನಿಗೆ ಈ ಭೂಮಿ ಮೇಲಿರುವ ಅತ್ಯಂತ ಪ್ರಬಲ ಶಕ್ತಿಗಳಾವುವು ಎಂದು ಪ್ರಶ್ನಿಸಿದ್ದಕ್ಕೆ, ನೀರು–ಗಾಳಿಬೆಂಕಿ ಅಂದನಂತೆ. ಅಂದರೆ ಅದು ಮೈಮರೆತು ಬೀಸತೊಡಗಿದರೆ ಅದರ ರಭಸಕ್ಕೆ ಎಲ್ಲ ನುಚ್ಚುನೂರಾಗುತ್ತದೆ, ಅದನ್ನು ತಡೆಯುವ ಶಕ್ತಿ ಯಾರಿಗೂ ಇಲ್ಲ ಎಂಬರ್ಥದಲ್ಲಿ. ಆದರೆ ಗಾಳಿಗಿರುವ ಆ ಪ್ರಾಣಶಕ್ತಿಯ ಬಗ್ಗೆ ಆಗ ಆತ ಯೋಚಿಸಿರಲಿಲ್ಲವೇನೋ! ಪ್ರಾಣಿಗಳು ಕುಡಿದು ಹೊರಬಿಡುವ ಇಂಗಾಲದ ಡೈ ಆಕ್ಸೈಡನ್ನು ನಾವು ಕುಡಿಯುತ್ತ, ನಾವು ಹೊರಬಿಡುವ ಆಮ್ಲಜನಕವನ್ನು ಪ್ರಾಣಿಗಳು ಕುಡಿಯುತ್ತ ಈ ಭೂಮಿ ಮೇಲೆ ಯಾವುದೂ ಕೊರತೆಯಾಗದಂತೆ ಸಮನ್ವಯತೆ ಕಾಪಾಡಿಕೊಂಡು ಬಂದಿದೆ. ಇಲ್ಲವಾದರೆ, ಬರೀ ನನ್ನಂಥ ಗಿಡಮರಗಳೇ ಭೂಮಿ ಮೇಲೆ ಇದ್ದಿದ್ದರೆ ವಾತಾವರಣದ ತುಂಬ ಬರೀ ಆಮ್ಲಜನಕವೋ, ಇಲ್ಲವೇ ಬರೀ ಪ್ರಾಣಿಗಳೇ ಇದ್ದಿದ್ದರೂ ಬರೀ ಇಂಗಾಲದ ಡೈ ಆಕ್ಸೈಡೋ ತುಂಬಿ ಬಿಟ್ಟಿರುತ್ತಿತ್ತೇನೋ!

ಇರಲಿ. ಈ ಪ್ರಾಣಿ ಪಕ್ಷಿಗಳು ಏನಿವೆಯಲ್ಲ, ಅವು ಎಲ್ಲೆಲ್ಲೋ ಅಲೆದಾಡಿ, ಅಲ್ಲಲ್ಲಿನ ವಿಷಯಗಳನ್ನೆಲ್ಲ ಸಂಗ್ರಹಿಸಿಕೊಂಡು ಬಂದು ನನಗೆ ಹೇಳುತ್ತವೆ. ಆಹಾರ ಹುಡುಕಿಕೊಂಡು ಬಂದು ನನ್ನ ಮೇಲೆ ಕೂರುವ, ನನ್ನ ಟೊಂಗೆಗಳ ಮೇಲೆ ಗೂಡು ಕಟ್ಟಿಕೊಂಡು ದೂರದೂರುಗಳಿಗೆಲ್ಲ ಹೋಗಿಬರುವ ಪಕ್ಷಿಗಳು ಹೇಳುವ ಕಥೆಗಳೆಲ್ಲ ನನಗೆ ಅರ್ಥವಾಗುತ್ತವೆ. ನಮ್ಮೂರಿನ ಪ್ರಾಣಿ ಪಕ್ಷಿಗಳೆಲ್ಲ ಈ ನೆಲದ ಮನುಷ್ಯರಾಡುವ ಮಾತುಗಳನ್ನೆ ಅರ್ಥಮಾಡಿಕೊಳ್ಳುವುದನ್ನು ಕಲಿತುಕೊಂಡುಬಿಟ್ಟಿವೆ. ನಮ್ಮ ಭಾಷೆ ಮನುಷ್ಯರಿಗೆ ಅರ್ಥವಾಗದಿದ್ದರೂ ಮನುಷ್ಯರಾಡುವ ಪ್ರತಿಯೊಂದು ಮಾತೂ ನಮಗೆಲ್ಲರಿಗೂ ಅರ್ಥವಾಗುತ್ತದೆ. ಎಲ್ಲ ಪ್ರಾಣಿ ಪಕ್ಷಿಗಳ ದೇಹಭಾಷೆಯೇ ವಿಶಿಷ್ಟ. ಅದು ಮನುಷ್ಯನ ದೇಹಭಾಷೆಯಷ್ಟು ಕೃತಕವಾಗಿಯಾಗಲೀ, ಕೃತ್ರಿಮವಾಗಿಯಾಗಲೀ ಇರುವುದಿಲ್ಲ. ಇನ್ನು ಮನುಷ್ಯರಿದ್ದಾರಲ್ಲ, ಅವರು ತಮ್ಮ ಮೋಸ, ವಂಚನೆ, ಉಪಟಳ, ಪ್ರೀತಿ, ಹಾದರದಂಥ ಎಲ್ಲ ಸುದ್ದಿಗಳನ್ನು ತಂದು ತಂದು ನನಗೆ ಮುಟ್ಟಿಸುತ್ತಾರೆ. ಬೆಳಗಿನಿಂದ ಸಂಜೆಯವರೆಗೆ ನನ್ನ ಬುಡದ ಕಟ್ಟೆಯ ಮೇಲಿನ ನೆರಳಿನಲ್ಲಿ ಕುಳಿತು ಹರಟೆ ಹೊಡೆಯುವವರಂತೂ ಮನದಾಳದ, ಮನೆಯಾಳದ ಗುಟ್ಟುಗಳನ್ನೆಲ್ಲ ತಂದು ಇತರರಿಗೆ ಹರಿಬಿಟ್ಟು ತಾವು ನಿರಾಳರಾಗಿಬಿಡುತ್ತಾರೆ. ಅವರಾಡಿದ ನಂತರ, ಸತ್ತ ಆ ಮಾತುಗಳಿಗೆ ಜೀವ ಬಂದು ಯಾರು ಯಾರನ್ನೋ ಹೇಗೆ ಹೇಗೋ ತಲ್ಲಣಿಸಲು ಶುರುವಿಟ್ಟುಕೊಳ್ಳಲಾರಂಭಿಸುತ್ತವೆ. ಈ ಮಾತುಗಳೇನಿವೆಯಲ್ಲ ಅವನ್ನೆಲ್ಲ ಕತೆ ಕಾದಂಬರಿ ರೀತಿಯಲ್ಲಿ ಸಂಗ್ರಹಿಸಿ ಬರೆದಿಡುವಂಥ ಪ್ರಕ್ರಿಯೆಯೇನಾದರೂ ಒಂದು ವೇಳೆ ಇದ್ದಿದ್ದರೆ, ಬಹುಶಃ ಅದಕ್ಕೆ ಈ ಭೂಮಿ ಮೇಲಿನ ಅಷ್ಟೂ ಜಾಗ ಸಾಲದೇ ಬರುತ್ತಿತ್ತೇನೋ. ನನ್ನೊಳಗೆ ಸೇರಿರುವ ಅಂಥ ಕೋಟ್ಯಂತರ ಕಥೆಗಳು ನನ್ನ ಭಾವಕೋಶದಲ್ಲಿ ಐಕ್ಯವಾಗಿವೆ. ಮನುಷ್ಯನಿಗೆ ಮೆದುಳಿನಲ್ಲಿ ಇರುವಂಥ ಸಂವೇದನೆ ನನ್ನ ಎಲ್ಲ ಅಂಗಾಂಗಗಳಲ್ಲೂ ಹರಡಿಕೊಂಡಿದೆ. ಆದರೆ ಹೀಗೆ ನೆನಪಿನಾಳದಿಂದ ನಾನು ಕಥೆಗಳನ್ನು ಹೆಕ್ಕಬೇಕೆಂದರೆ ಬಹುಶಃ ಅದು ನನ್ನ ಕಾಂಡದಿಂದ ಸಾಧ್ಯವಾಗುತ್ತಿರಬಹುದೆಂದುಕೊಂಡಿದ್ದೇನೆ. ಆದರೆ ನನ್ನಲ್ಲಿರುವ ನೆನಪುಗಳಿಗೆ, ಕಥೆಗಳಿಗೆ ದೇಹವಿಲ್ಲ, ಆಕೃತಿಯಿಲ್ಲ, ಜೀವವಿಲ್ಲ. ಆದರೂ ಅವು ಬದುಕಿವೆ! ನಾನು ಎಲ್ಲಿಯವರೆಗೆ ಬದುಕಿರುತ್ತೇನೋ ಅಲ್ಲಿಯವರೆಗೆ ಅವೆಲ್ಲ ನನ್ನೊಳಗೆ ಜೀವಂತವಾಗಿರುತ್ತವೆ. ಆಮೇಲೆ? ನನ್ನ ಅರಿವಿಗೂ ಬಾರದ ಇಂಥ ಎಷ್ಟೊಂದು ನೆನಪುಗಳು, ಕಥೆಗಳು ಬದುಕಿಕೊಳ್ಳಲು ಬೇಕಾದ ಒಂದು ದೇಹದ ಆಶ್ರಯವನ್ನು ಪಡೆಯಲು ಹಪಾಹಪಿಸುತ್ತಿರಬೇಕು ಎಂಬುದೇ ಒಂದು ವಿಸ್ಮಯವಾಗಿ ಕಾಣುತ್ತದೆ ನನಗೆ.

ನನಗೋ ಮೈತುಂಬ ಭಾವಕೋಶಗಳೇ ತುಂಬಿರುವುದರಿಂದ, ಐದು ಶತಮಾನಗಳ ಕಾಲದ ನೆನಪುಗಳು ಇಡಿಕಿರಿದು ತುಂಬಿರುವುದರಿಂದ ವಸ್ತುವಿಷಯ ಎಲ್ಲೆಲ್ಲಿಗೋ ಹಾರಿಹೋಗುತ್ತಿರುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಕೋಟ್ಯಂತರ ಅನುಭವಗಳಿದ್ದರೂ ಅವನ್ನೆಲ್ಲ ಈ ಕೊನೆಗಾಲದಲ್ಲಿ, ಲೇಖಕನೊಬ್ಬ ಆತ್ಮಕಥೆ ಬರೆಯುವಾಗ ಯಾವುದನ್ನು ಹೇಳಬೇಕು, ಯಾವುದನ್ನು ಬಿಡಬೇಕು ಎಂದು ತಳಮಳಿಸುವಂತೆ, ಒಂದನ್ನು ಹೇಳಲು ಕೈಗೆತ್ತಿಕೊಂಡರೆ ನೂರೆಂಟು ನೆನಪುಗಳು ಒತ್ತರಿಸಿ ಬಂದು ಯಾವುದನ್ನು ಹೇಳುವುದು, ಯಾವುದನ್ನು ಬಿಡುವುದು ಎಂಬ ಜಿಜ್ಞಾಸೆ ಮೂಡುತ್ತದೆ. ಇಲ್ಲವೇ ಒಂದು ವಿಷಯದ ಬಗ್ಗೆ ಹೇಳುತ್ತಿರುವಾಗ ನೂರೆಂಟು ನೆನಪುಗಳು ಹೀಗೆ ಬಂದು (ಅಕ್ಷರವಾಗುವ ಮೊದಲೇ) ಹಾಗೆ ತೇಲಿ ಹೋಗುವಂತೆ ಮಿಂಚಿ ಮರೆಯಾಗುತ್ತಿರುತ್ತವೆ. ಆದ್ದರಿಂದ ಹೇಗೆ